# ಅನುರಾಗ–ಅನುಬಂಧಗಳ ವಿಭಿನ್ನ ಅನುಭವ

ನಾನು ಅಬ್ರಾಹಮ್‌ಗೆ ಒಂದು ಪರದೆಯಂತಿದ್ದೆ. ಅವನು ಆ ಪರದೆಯನ್ನು ಎತ್ತಲು ಬಯಸುತ್ತಿರಲಿಲ್ಲ. ಒಂದು ವೇಳೆ ನೀನು ನೇರವಾಗಿ ವಿಚ್ಛೇದನಕ್ಕೆ ಒಪ್ಪದಿದ್ದರೆ, ನಾನು ನಿನ್ನೆಲ್ಲಾ ಆಟಗಳನ್ನು ಬಯಲು ಮಾಡುತ್ತೇನೆ, ಕೋರ್ಟಿನಲ್ಲಿ ಎಲ್ಲವನ್ನೂ ಕಕ್ಕುತ್ತೇನೆ, ಆಗ ನಿನಗೆ ಕೆಟ್ಟ ಹೆಸರು ಬರುತ್ತದೆ ಎಂದು ಗದರಿದೆ. ವಿಚ್ಛೇದನ ಒಂದು ದುಃಖದ ಘಟನೆ ಎಂಬುದು ನಿಜ. ಮಗುವಿದ್ದಾಗ ಅದರ ಬೆಲೆ ಹೆಚ್ಚುತ್ತದೆ. ಆದರೆ ವಿವಾಹದಲ್ಲಿ ಪಾಪಿಯೊಬ್ಬನಿದ್ದಾಗ, ವಿಚ್ಛೇದನ ಮಾತ್ರವೇ ಒಂದು ಸಾಧ್ಯತೆಯಾಗಿ ಉಳಿಯುತ್ತದೆ. ಅಬ್ರಾಹಮ್ ನನ್ನೊಂದಿಗೆ ಪಾಪಕಾರ್ಯವನ್ನೆಸಗಿದ್ದ. ಅವನು ನಮ್ಮ ವೈವಾಹಿಕ ಜೀವನವನ್ನು ಕಾಯ್ದಿಟ್ಟುಕೊಳ್ಳುವಂತೆ ಒತ್ತಾಯಿಸಲು ಸಾಧ್ಯವಿರಲಿಲ್ಲ. ಅವನು ವಿಚ್ಛೇದನಕ್ಕೆ ಒಪ್ಪಬೇಕಾಯಿತು. ಜೋಶುಆನನ್ನು ನನ್ನೊಂದಿಗೆ ಡೆನ್ಮಾರ್ಕ್‌ಗೆ ಕರೆದೊಯ್ಯಲು ಸಹ ಒಪ್ಪಿದ. ಹಾಗಂತ ನಾವು ಹೆಸರಿಗಷ್ಟೇ ಜೊತೆಯಲ್ಲಿದ್ದೆವು. ಅವನ ಮತ್ತು ನನ್ನ ಸಂಬಂಧ ಎಂದೋ ಮುಗಿದುಹೋಗಿತ್ತು. ಒಮ್ಮೊಮ್ಮೆ ಮಾತ್ರ ಚರ್ಚ್‌ನ ವಿಶೇಷ ಕಾರ್ಯಕ್ರಮಗಳಲ್ಲಿ ಅವನ ಬಗಲಿನಲ್ಲಿ ನಿಂತು, ಅವನ ಅರ್ಧಾಂಗಿನಿಯಾಗುತ್ತಿದ್ದೆ, ಆದರೆ ಕಾರ್ಯಕ್ರಮ ಮುಗಿದ ನಂತರ, ಅವನ ಕೈಯನ್ನು ಕೊಡವಿ ದೂರಕ್ಕೆ ಸರಿಯುತ್ತಿದ್ದೆ.

ನಾನು ಜೋಶುಆನನ್ನು ನನ್ನೊಂದಿಗೆ ಡೆನ್ಮಾರ್ಕ್‌ಗೆ ಕರೆದೊಯ್ದು ಅಬ್ರಾಹಮ್‌ಗೆ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸುತ್ತಿದ್ದೆ. ಅವನಿಗೆ ಹೆಂಡತಿಯ ಜೀವನಾಂಶ ಕೊಡಬೇಕಿರಲಿಲ್ಲ, ಮಗನ ಪಾಲನೆ ಪೋಷಣೆಗೆ ಹಣವನ್ನು ಖರ್ಚು ಮಾಡಬೇಕಿರಲಿಲ್ಲ. ಹೀಗಾಗಿ ಪರಸ್ಪರರ ಸಲಹೆಯಿಂದ, ಯಾವುದೇ ಅಡೆತಡೆಗಳಿಲ್ಲದೆ ಶೀಘ್ರವೇ ನಮಗೆ ವಿಚ್ಛೇದನ ಲಭಿಸಿತು.

'ನಾನೂ ಸಹ ನೀನಾಳೊಂದಿಗೆ ಪರಸ್ಪರ ಸಲಹೆ ಮೇರೆಗೆ, ಯಾವುದೇ ಅಡತಡೆಯಿಲ್ಲದೆ ಬೇರೆಯಾಗಿದ್ದೆ. ವಿವಾಹ ಜೀವನಪರ್ಯಂತ ಕಾಯ್ದಿಟ್ಟುಕೊಳ್ಳುವಂಥ ಸಮರ್ಪಣೆ ಎಂಬುದು ಸತ್ಯ. ಆದರೆ ಕೆಲವು ಪರಿಸ್ಥಿತಿಗಳಲ್ಲಿ, ವಿಚ್ಛೇದನ ಮತ್ತು ಮರುವಿವಾಹಕ್ಕೆ ದೇವರು ಸಹ ಒಪ್ಪಿಗೆಯನ್ನು ಕೊಡುತ್ತಾನೆ' ಎಂದ ಪಾಲ್.

ಹೌದು, ಪಾಲ್ ಹೇಳಿದ್ದು ಸರಿಯೇ. ನಾನೀಗ ವಿಚ್ಛೇದಿತಳಾಗಿದ್ದೆ, ಸಂಪೂರ್ಣವಾಗಿ ಸ್ವತಂತ್ರಳಾಗಿದ್ದೆ. ನನ್ನ ಹೊಸ ಪ್ರಿಯಕರ ಲಾರ್ಸ್ ಹೈನಸನ್ ಡೆನ್ಮಾರ್ಕ್‌ನಲ್ಲಿದ್ದ. ಅವನೊಂದಿಗೆ ಬದುಕಲು ನಾನು ಮೊಮ್ಬಾಸಾವನ್ನು ತ್ಯಜಿಸಬೇಕಿತ್ತು. ಒಂದು ಸ್ಥಳದಲ್ಲಿ ಏಳು ವರ್ಷಗಳ ಕಾಲ ವಾಸ ಮಾಡಿದ ನಂತರ ಅದನ್ನು

